# ಈಜುಕೊಳದಿಂದ ಹೊಡೆದಾಟದವರೆಗೆ...

ಅರ್ಧ ಉದ್ದಿನ ವಡೆಯನ್ನು ಚಮಚದಲ್ಲಿ ಮುರಿಯಲು ಕಷ್ಟಪಡುತ್ತಿದ್ದ ನಟಿಗೆ ಗತವೈಭವ ನೆನೆದರೆ ಪುಳಕ. 'ತಮ್ಮ ಜೊತೆ ಕೋತಿ ನಟಿಸಿದರೂ ಸಿನಿಮಾ ಹಿಟ್ ಆಗುತ್ತದೆ ಎಂದು ಕೆಲವರು ತಮಾಷೆ ಮಾಡಿದ್ದ ಕಾಲ ಅದಲ್ಲವೇ?' ಎಂದು ಸುದ್ದಿಮಿತ್ರೆಯೊಬ್ಬರು ನೆನಪಿಸಿದಾಗ, ರೂಜ್ ಹಚ್ಚಿದ್ದ ನಟಿಯ ಚೊಂಬುಕೆನ್ನೆ ಇನ್ನೂ ಉಬ್ಬಿಕೊಂಡಿತು. ಒಂದು ಕಾಲದಲ್ಲಿ ಈಜುಡುಗೆ ತೊಟ್ಟು, ಕೊಳದಿಂದ ಮೇಲೆದ್ದು ಸಿನಿಮಾ ನೋಡುಗರು ಕುಳಿತಲ್ಲಿಯೇ ಬೆವರುವಂತೆ ಅಭಿನಯಿಸಿದ್ದ ಆ ನಟಿ ಆತ್ಮವಿಶ್ವಾಸದ ಖನಿ. ಅಲ್ಲಲ್ಲಿ ಓವರ್ ಆ್ಯಕ್ಟಿಂಗ್ ಎನಿಸಿದರೂ  ದೀರ್ಘ ಕಾಲ ಅವರು ಫಾರ್ಮ್‌ನಲ್ಲಿದ್ದರು. ನಾಯಕನಟರೇ ವಿಜೃಂಭಿಸುತ್ತಿದ್ದ ಕಾಲದಲ್ಲಿ ಅವರ ಕಾಲ್‌ಷೀಟ್ ಮೊದಲು ಪಡೆದು, ಆಮೇಲೆ ನಾಯಕರನ್ನು ಗೊತ್ತುಪಡಿಸುವಷ್ಟು ಅವರ ಖ್ಯಾತಿ ಉತ್ತುಂಗಕ್ಕೇರಿತ್ತು. ರಾಜ್‌ಕುಮಾರ್ ಬ್ಯಾನರ್‌ನ ಚಿತ್ರವನ್ನು ಚಿಮ್ಮುಹಲಗೆಯಾಗಿಸಿಕೊಂಡು ಆಮೇಲೆ ಬೆರಗು ಮೂಡಿಸುವಂತೆ ಬೆಳೆದ ಕೆಲವು ನಟಿಯರ ಸಾಲಿಗೆ ಅವರೂ ಸೇರುತ್ತಾರೆ.

ಬಜಾರಿ, ಗಯ್ಯಾಳಿ, ಗೃಹಿಣಿ, ಸಾದಾಸೀದಾ ಪ್ರೇಮಿ ಹೀಗೆ ಲಲನೆಗೆ ಒಪ್ಪುವಂಥ ಪಾತ್ರವೈವಿಧ್ಯದಲ್ಲಿ ಪಳಗಿದ ನಟಿ, ಇದ್ದಕ್ಕಿದ್ದಂತೆ ಸಾಹಸ ಪ್ರಧಾನ ಚಿತ್ರಗಳಿಗೂ ಬಣ್ಣಹಚ್ಚಿದರು. ನಿರ್ಮಾಪಕರೊಬ್ಬರನ್ನು ಮದುವೆಯಾಗಿ, ಮಕ್ಕಳೊಂದಿಗೆ ಸಂಸಾರ ಸುಖದಲ್ಲಿ ಒಂದಿಷ್ಟು ವರ್ಷ ಮುಳುಗಿದ ಅವರು ಬಣ್ಣದಲೋಕದ ಗೀಳನ್ನು ಮಾತ್ರ ಬಿಡಲಿಲ್ಲ. ಸಿನಿಮಾ ಅಭಿರುಚಿಯ ವಿಷಯದಲ್ಲಿ ಪತಿ–ಪತ್ನಿ ಇಬ್ಬರಿಗೂ ಸಾಮ್ಯವಿದೆ. ಸಾಹಸವೆಂದರೆ ಇಬ್ಬರೂ ಉತ್ಸಾಹಿಗಳೇ. ಬೈಕುಗಳನ್ನು ಹಾರಿಸುವುದು, ಮೈನವಿರೇಳಿಸುವ ಹೊಡೆದಾಟದ ದೃಶ್ಯಗಳನ್ನು ಸಂಯೋಜಿಸುವುದಕ್ಕೆ ಹಣ ಚೆಲ್ಲುವುದರಲ್ಲಿ ನಟೀಮಣಿಯ ಪತಿ ಸದಾ ಮುಂದು. ಅದಕ್ಕೇ ಅವರು ಲಕ್ಷಗಟ್ಟಲೆ ರೂಪಾಯಿಯಲ್ಲೇ ಸಿನಿಮಾ ತಯಾರಾಗುತ್ತಿದ್ದ ಕಾಲದಲ್ಲಿಯೇ ಕೋಟಿ ನಿರ್ಮಾಪಕ ಎನಿಸಿಕೊಂಡಿದ್ದು.

ಸಂಸಾರ ಸುಖದಲ್ಲಿ ಮುಳುಗಿದ ನಟೀಮಣಿಯ ತೂಕ ಹೆಚ್ಚಾಯಿತು. ಮಕ್ಕಳು ತಮ್ಮ ಪಾಡಿಗೆ ತಾವು ಆಟವಾಡಿಕೊಳ್ಳುವಷ್ಟು ಬೆಳೆದ ಮೇಲೆ ಮತ್ತೆ ಬಣ್ಣ ಹಚ್ಚುವ ಬಯಕೆ ಮೂಡಿತು. ಪತಿಯೇ ನಿರ್ಮಾಪಕ. ಸಾಹಸ ಪ್ರಧಾನ ದೃಶ್ಯಗಳಿಗೆ ಸಂಭಾಷಣೆ ಬರೆಯುವುದರಲ್ಲಿ ಎತ್ತಿದ ಕೈ ಎನಿಸಿದ ಒಬ್ಬರನ್ನು ಸ್ಕ್ರಿಪ್ಟ್ ಸಿದ್ಧಪಡಿಸಲು ಗೊತ್ತುಪಡಿಸಿದ್ದಾಯಿತು. ದೇಹವನ್ನು ಸಣ್ಣಗಾಗಿಸುವುದು ಹೇಗೆ ಎಂಬ ಸಂಶೋಧನೆಗೆ ಹಲವು ದಾರಿಗಳಿದ್ದವು. ಸ್ಕ್ರಿಪ್ಟ್ ತಯಾರಾಯಿತು. ನಟೀಮಣಿ ದೇಹತೂಕ ಇಳಿಸಿಕೊಂಡರು. ಹೊಡೆದಾಟದ ದೃಶ್ಯಗಳು ಮೈನವಿರೇಳಿಸುವಂತೆ ಮೂಡಿಬರಲು ಡ್ಯೂಪ್‌ಗಳನ್ನು ಹುಡುಕುವುದು ಕಷ್ಟವೇನೂ ಇರಲಿಲ್ಲ. ಚಿತ್ರೀಕರಣ ಪ್ರಾರಂಭವಾಗಿ, ದೃಶ್ಯಗಳನ್ನು ಕ್ಯಾಮೆರಾ ಸೆರೆಹಿಡಿದದ್ದೇ ಹಿಡಿದದ್ದು. ಮೀಟರ್‌ಗಟ್ಟಲೆ ಸಿನಿಮಾ ಸುತ್ತಿಕೊಂಡಿತು. ಅದನ್ನು ಎಡಿಟ್ ಮಾಡಲು ಹೊರಟಾಗಲೇ ನಿರ್ಮಾಪಕರಿಗೆ ತಾವು ಮೈಮೇಲೆ ಎಳೆದುಕೊಂಡಿರುವ ಕಷ್ಟ ಎಂಥದ್ದು ಎಂಬುದು ಅರಿವಾದದ್ದು. ಕೊನೆಗೂ ಆ ಸಿನಿಮಾ ವರ್ಷಗಟ್ಟಲೆ ಯತ್ನದ ನಂತರ ತೆರೆಕಂಡು, ಸುಮಾರಾಗಿ ಓಡಿತು.

ನಿರ್ಮಾಪಕರಿಗೆ ಸಿನಿಮಾ ವಿತರಣೆಯ ಪಟ್ಟುಗಳೂ ಗೊತ್ತಿರುವುದರಿಂದ ಹಾಕಿದ ಬಂಡವಾಳ ವಾಪಸ್ ಪಡೆಯುವ ದಾರಿಗಳನ್ನು ಹುಡುಕುವುದೇನೂ ಕಷ್ಟವಿಲ್ಲ. ಒಂದು ರೀತಿ ಭಗೀರಥ ಯತ್ನದ ತರಹ ಆದ ಆ ಸಿನಿಮಾ ಬಂದಮೇಲೆ ನಟೀಮಣಿ ಇನ್ನಷ್ಟು ಚಿತ್ರಗಳಲ್ಲಿ ನಟಿಸಿದರು. ಎಲ್ಲವೂ ಸಾಹಸ ಪ್ರಧಾನ ಸಿನಿಮಾಗಳೇ. ಬಂಡವಾಳಕ್ಕೆ ಮೋಸವಿಲ್ಲ ಎಂದು ತಮ್ಮ ಪತ್ನಿಯ ಬೆನ್ನುತಟ್ಟುತ್ತಾ, ಹೀಗೆಯೇ ಸಿನಿಮಾಗಳನ್ನು ಮಾಡುತ್ತಾ ನಿರ್ಮಾಪಕರು ಮುಗುಳ್ನಗುತ್ತಾ ಇದ್ದಾರೆ. ಅವರೊಳಗೆ ಎಂಥ ನೋವು ಅಡಗಿದೆಯೋ ಎನ್ನುವುದು ಕೆಲವರ ಕುಹಕ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68